ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ?

ಆ) ಹಾಕಿಕೊಳ್ಳದಿದ್ದಲ್ಲಿ, ಕಾರಣಗಳೇನು?

ಇ) ಈಗಲಾದರು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗುವುದೇ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಬೈಂದೂರು ಕ್ಷೇತ್ರದ ಮರವಂತೆ ಕಡಲ ತೀರದಲ್ಲಿ ಹೊನಲು ಬೆಳಕು ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ನಬಾರ್ಡ್‌ನಲ್ಲಿ ಮಂಜೂರಾದ ಮೀನುಗಾರಿಕಾ ರಸ್ತೆಗೆ ಟೆಂಡರ್ ಕರೆಯದಿರುವುದು.

548(534)

ಶ್ರೀ ಗೋಪಾಲಪೂಜಾರಿ ಕೆ. (ಬೈಂದೂರು): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಮೀನುಗಾರಿಕಾ ರಸ್ತೆಗೆ (ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ) ರಿಪೇರಿ ಮಾಡಲು ಹಣ ಬಿಡುಗಡೆಯಾಗದಿರಲು ಕಾರಣಗಳೇನು?

ಆ) ಮೀನುಗಾರಿಕಾ ರಸ್ತೆಗೆ ನಬಾರ್ಡ್ ಮೂಲಕ ಅನುಮತಿ ದೊರಕಿದ್ದರೂ ಟೆಂಡರ್ ಕರೆಯದಿರಲು ಕಾರಣಗಳೇನು?

ಇ) ಮೀನುಗಾರಿಕಾ ರಸ್ತೆ ನಬಾರ್ಡ್ ಮುಖಾಂತರ ಕೆಲಸ ಪೂರ್ಣಗೊಂಡಿದ್ದರೂ ಹಣ ಬಿಡುಗಡೆಯಾಗದಿರಲು ಕಾರಣಗಳೇನು?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರಸ್ತುತ ಸಾಲಿನಲ್ಲಿ 5 ಮಿನುಗಾರಿಕಾ ರಸ್ತೆಗಳ ದುರಸ್ತಿಗಾಗಿ ರೂ:4.00 ಲಕ್ಷ ಹಣ ಬಿಡುಗಡೆ ಮಾಡಲಾಗಿದೆ.

ಆ) ನಬಾರ್ಡ್‌ನಿಂದ ಮಂಜೂರಾಗಿರುವ 5 ರಸ್ತೆಗಳು ಮತ್ತು 1 ಸೇತುವೆ ಕಾಮಗಾರಿಗಳಿಗೆ ದಿನಾಂಕ 25-9-2000 ರಂದು ಟೆಂಡರ್ ಕರೆಯಲಾಗಿತ್ತು. ಆದರೆ ಸರ್ಕಾರದ 'ಟ್ರಾನ್ಸ್‌ಪೆರೆನ್ಸಿ ಆಕ್ಟ್'ಯನ್ವಯ ಜಿಲ್ಲಾ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟವಾಗಬೇಕೆಂಬ ನಿಯಮವಿರುವುದರಿಂದ ಟೆಂಡರನ್ನು ಮುಂದೂಡಿ ಈಗ ದಿನಾಂಕ 8-3-2001ನ್ನು ಕೊನೆಯ ದಿನಾಂಕವೆಂದು ನಿಗದಿಪಡಿಸಿ ಟೆಂಡರ್ ಕರೆಯಲಾಗಿದೆ.

ಇ) ನಬಾರ್ಡ್ ಯೋಜನೆಯಲ್ಲಿ ಮಿನುಗಾರಿಕಾ ರಸ್ತೆ ಮತ್ತು ಸೇತುವೆ ಕಾಮಗಾರಿಗಳಿಗೆ ಒಟ್ಟು ರೂ.85 ಲಕ್ಷ ಬಿಡುಗಡೆಯಾಗಿದೆ. ಈಗಾಗಲೇ ಗುತ್ತಿಗೆ ನೀಡಿರುವ ಕಾಮಗಾರಿಗಳು ಪ್ರಗತಿಯಲ್ಲಿದ್ದು ರೂ:34.79 ಲಕ್ಷಗಳಷ್ಟು ಕೆಲಸ ಪೂರ್ಣಗೊಂಡಿದ್ದು, ಬಿಲ್ ಪಾವತಿಯಾಗಿದೆ.

ಪ್ರವಾಸೋದ್ಯಮ ಇಲಾಖೆಯಿಂದ ಮದ್ಯ ಮಾರಾಟಕ್ಕೆ ಶಿಫಾರಸ್ಸು ಮಾಡಿದ ಹೋಟೆಲ್‌ಗಳು.

549(537)

ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ): ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರವಾಸೋದ್ಯಮ ಇಲಾಖೆಯಿಂದ ಶಿಫಾರಸ್ಸು ಮಾಡಿ ಮದ್ಯ ವ್ಯಾಪಾರದ ಪರವಾನಗಿ ಪಡೆದ ನಂತರ ಅಂತಹ ಖಾಸಗಿ ಹೋಟೆಲುಗಳಲ್ಲಿ ಇರಬೇಕಾದ ಸೌಲಭ್ಯಗಳೇನು?

ಆ) ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯು ಶಿಫಾರಸ್ಸು ಮಾಡಿ ಮದ್ಯ ಮಾರಾಟ ಮಾಡುತ್ತಿರುವ ಹೋಟೆಲುಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು).

ಇ) ಉಡುಪಿ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಯಾರ್ಯಾರಿಗೆ ಪರವಾನಿಗೆ ನೀಡಲಾಗಿದೆ?

ಈ) ಈ ಪರವಾನಿಗೆಯನ್ನು ಹೊಂದಿದವರು ಷರತ್ತುಗಳ ಅನ್ವಯ ಸೌಲಭ್ಯಗಳನ್ನು